ಅಷ್ಟೇ! ಯಾಕೋ ಕಥೆಯನ್ನು ಪರಿಷ್ಕರಿಸುವ ಕೆಲಸಕ್ಕೆ ಮನಸ್ಸು ಹಿಂದೇಟು ಹಾಕಿತು.

ಬಿಜಿ ಇದ್ದೇನೋ? ಹಾಗೇನೂ ಇಲ್ಲ ಪ್ರದಿ, ಹೀಗೆ ಏನೋ ಎಡಿಟ್ ಮಾಡೋಣ ಅಂದ್ಕೊಂಡೆ ಯಾಕೋ ಮೂಡ್ ಇಲ್ಲ. ಹಾಗಿದ್ರೆ ಒಂದು ಗಳಿಗೆ ನೋಡ್ಕೊಂಡು ಬರೋಣ್ವಾ, ಹ್ಞೂ ಅನ್ನೋದಾದ್ರೆ ನಾನು ಈಗಲೇ ಹೊರಟು ಬರ್ತೀನಿ, ನಮ್ಮ ಗುಂಪಿನವರು ಆಗ್ಲೇ ಕೆಲವರು ಹೋಗಿದ್ದಾರೆ. ಆಯಿತು, ನಾನು ಬರ್ತೀನಿ ಎಂದು ಸಿಸ್ಟಮ್‌ನಿಂದ ಲಾಗ್ ಔಟ್ ಆಗಿ ಸೆರಗಿನ ತುದಿಯಲ್ಲಿ ಚಿಟಿಕೆ ಅರಿಶಿನ ಕಟ್ಟಿ ಗೀಸರ್ ಸ್ವಿಚ್ ಹಾಕಿ, ತಲೆ ಮೈ ಒರೆಸಿಕೊಳ್ಳಲು ಎರಡು ಟವಲ್, ಉಡುಪು ಅಣಿಮಾಡಿ, ಮನೆ ಬೀಗ ಹಾಕಿ ಗೇಟಿನ ಬಳಿ ಬರುವಷ್ಟರಲ್ಲಿ ಶ್ರೀಪ್ರದ ನಮ್ಮ ಮನೆಯನ್ನು ಸಮೀಪಿಸುತ್ತಿದ್ದಳು. ಎಷ್ಟು ವಯಸ್ಸಾಗಿತ್ತಂತೆ ಪ್ರದೀ? ಎಪ್ಪತ್ತೈದು... ಸಾಯೋ ವಯಸ್ಸೇನಲ್ಲ ಆದರೆ ಮನುಷ್ಯನಿಗೆ ನೆಮ್ಮದಿ ಇರಲಿಲ್ಲ ನೋಡು. ಬೇರೆ ಏನಾದರೂ ಕಾಯಿಲೆ? ದಾರಿ ಸವೆಯಲು ಒಂದಷ್ಟು ಮಾತುಕತೆ ಒಂದೇ ಎರಡೇ? ವಿಪರೀತ ಸಿಗರೇಟ್ ಹುಚ್ಚು, ಸಾಲದ್ದಕ್ಕೆ ಶುಗರು, ಇಷ್ಟಾದರೂ ಶಿಸ್ತಿನ ಜೀವನ ಇಲ್ಲ ನಾನೂ ಇದ್ದೀನಿ ಬದುಕಿದ್ದೀನಿ ಅನ್ನೋ ಹಾಗಿದ್ದರು. ಆತನನ್ನು ನೋಡಿದ್ದೀನಿ ಜೀವನೋತ್ಸಾಹ ಅನ್ನೋದು ಹತ್ತಿರಕ್ಕೂ ಸುಳಿದಿರದು ಅಷ್ಟು ಸಪ್ಪೆ. ಸೋ ಅಂತ ಸಪ್ಪಗೆ ಇರೋವ್ರು. ಹೌದು ಸತ್ತ್ಯಾ, ಲಿವರ್ ಡ್ಯಾಮೇಜ್ ಬೇರೆ ಆಗಿತ್ತಂತೆ, ನಾಲ್ಕು ದಿನದಿಂದ ಆಸ್ಪತ್ರೇಲಿ ಇದ್ರು, ಚಿಕಿತ್ಸೆ ಫಲಿಸದೆ ಹೋಯ್ತಂತೆ.

ನನ್ನ ಹೆಸರು ಸತ್ಯಪ್ರಿಯ ಆದರೂ ಸತ್ಯಾ, ಪ್ರಿಯಾ, ಸತ್ರಿ, ಸತ್ತು ಹೀಗೆಲ್ಲ ಕರೆಸಿಕೊಳ್ಳುತ್ತಿದ್ದೆ. ಹೆಸರಲ್ಲೇನಿದೆ? ಇವೆಲ್ಲಕ್ಕೂ ಹೂಂಗುಟ್ಟುತ್ತಿದ್ದೆ; ಗಿರಿಜೆಯೂ ಅಂಥ ಚುರುಕು ಇಲ್ಲ ಅಲ್ವಾ? ನಿಜ ಆದರೆ ಅವಳ ತವರು ಮನೆಯವರ ಸಹಾಯದಿಂದ ಇರೋಕ್ಕೆ ಈ ಪುಟ್ಟ ಸೂರು ಇಲ್ಲದಿದ್ದರೆ ಈ ಮನುಷ್ಯನನ್ನು ಕಟ್ಕೊಂಡು ಇನ್ನೆಷ್ಟು ಏಗಬೇಕಿತ್ತೋ? ಗಿರಿಜೆಯ ಮನೆ ಮುಂದೆ ಪೆಂಡಾಲ್ ಹಾಕಿದ್ದರು. ಅಂಗಳದಲ್ಲಿ ಒಂದು ದಿವಾನದಲ್ಲಿ ನಿರ್ಜೀವ ದೇಹವನ್ನು ಮಲಗಿಸಿದ್ದರು. ಮನೆಯೊಳಗೇ ಹಾಲಿನಲ್ಲಿ ಗಿರಿಜೆ ಕುಳಿತಿದ್ದರು. ಒಂದಷ್ಟು ಮಂದಿ ಸಂಬಂಧಿಕರು ಅತ್ತಾಯಿತ್ತರು. ಕಾಲೊನಿ ಮಹಿಳಾ ಬಳಗದ ಸೀನಿಯರ್ ಮೆಂಬರ್ ವಾರಿಜ, ಗಿರಿಜೆಯನ್ನು ಸಮಾಧಾನಿಸುತ್ತಿದ್ದರು. ನಿಮಗೂ ಶುಗರ್ ಇದೆ ಬಿ.ಪಿ. ಇದೆ ಏನಾದ್ರೂ ತೊಗೊಂಡ್ರಿ ತಾನೇ? ಹೋಗೋವ್ರು ಹೋಗ್ತಾರೆ, ಹಾಗೇಂತ ನಿಮ್ಮ ಆರೋಗ್ಯದ ಕಾಳಜಿನೂ ಇರಲಿ, ಏಳಿ, ತಲೆ ಸುತ್ತು ಬಂತೀತು ಒಂದು ಇಡ್ಲಿ ತಿಂದು ಕಾಫಿ ತೊಗೊಂಡು ಮಾತ್ರೆ ಹಾಕ್ಕೊಳ್ಳಿ ಎನ್ನುತ್ತ ಬಲವಂತವಾಗಿ ಇಡ್ಲಿ ಚಟ್ನಿ ಹಾಕಿದ್ದ ತಟ್ಟೆ ಕೊಟ್ಟರು. ಗಿರಿಜೆ ಒಂದು ಇಡ್ಲಿ ತಿಂದು ಸಾಕು ಎಂದು ತಟ್ಟೆ ಬದಿಗಿಟ್ಟಾಗ ಇಷ್ಟು ತಿಂದರಲ್ಲ? ಸದ್ಯಕ್ಕೆ ಸಾಕು ಬಿಡಿ ಮೊದಲು ಮಾತ್ರೆ ತೊಗೊಳ್ಳಿ ಎಂದು ತಟ್ಟೆ ಲೋಟ ಹಿತ್ತಲಿಗೆ ಹಾಕಿ ಬಂದರು. ವಿನೀತ ವಿದ್ಯಾರ್ಥಿಯಂತೆ ಡೈನಿಂಗ್ ಟೇಬಲ್‌ನಲ್ಲಿದ್ದ ಮಾತ್ರೆ ಡಬ್ಬದಿಂದ ಎರಡು ಮಾತ್ರೆ ತೆಗೆದು ಬಾಯಿಗೆ ಹಾಕಿಕೊಂಡು ನೀರು ಕುಡಿದರು ಗಿರಿಜೆ.

ಇಷ್ಟು ಹೊತ್ತು ಹಟ ಮಾಡ್ತಿದ್ದರು ಆಂಟೀ ನೀವು ಹೇಳಿದ್ದು ಒಳ್ಳೆದಾಯ್ತು; ಗಿರಿಜೆಯ ನಾದಿನಿಯ ಮೊನಚು ಮಾತು. ಮನಸ್ಸಿನ ಕಷ್ಟ, ಏನೂ ಬೇಡವಾಗುತ್ತೆ ನೋಡು. ನಾನು ಗಿರಿಜೆಯನ್ನು ವಹಿಸಿಕೊಂಡೆ.ಎಷ್ಟಾದರೂ ಹಿರಿಯರು ಹಿರಿಯರೇ! ಅವರ ಮಾತನ್ನು ತಳ್ಳಿ ಹಾಕದೇ ಪಾಲಿಸಿದ್ದು ಒಳಿತೇ ಆಗಿತ್ತು. ನರ್ಮದಾ ಇನ್ನೂ ಬಂದಿಲ್ಲ. ಅವಳಿಗೋಸ್ಕರ






ಕಾಯ್ತಿದ್ದಾರೆ; ಯಾರೋ ಪಿಸುಗುಟ್ಟಿದರು. ನರ್ಮದಾ ಗಿರಿಜೆಯ ಸೊಸೆ. ಅವಳು ಬಂದರೂ ಏನ್ಮಾಡೋಕ್ಕಾಗುತ್ತೆ ಪಾಪ, ಮತ್ಯಾರೋ ಲೊಚಗುಟ್ಟಿದರು. ಒಂದೈದು ನಿಮಿಷ ಅಲ್ಲೇ ಇದ್ದು ಮನೆಗೆ ಹೋಗಬಹುದೇ ಎಂದು ಸನ್ನೆ ಮಾಡಿದಳು ಶ್ರೀಪ್ರದ. ಅದನ್ನು ಗಮನಿಸಿದ ವಾರಿಜ ಮುಂದಿನ ಕಾರ್ಯಕ್ರಮ ಏನಿದ್ರೂ ಗ್ರೂಪ್‌ನಲ್ಲಿ ತಿಳಿಸ್ತೀನಿ, ನಿಮ್ಮೆಲ್ಲರ ಸಹಕಾರ ಬೇಕು ಎಂದು ಕೈಜೋಡಿಸಿದಾಗ, ಅದಕ್ಕೇನಂತೆ ತಲೆಯಾಡಿಸಿ ಹೊರಟೆವು.

***

ಮನೆಗೆ ಬಂದೊಡನೆ ನೇರ ಬಚ್ಚಲಿಗೆ ಹೋಗಿ ಗೀಸರಿನ ಸ್ವಿಚ್ ಆಫ್ ಮಾಡಿ, ಸೆರಗಿನ ಗಂಟಿನಿಂದ ಅರಿಶಿನ ತೆಗೆದು ಕೆನ್ನೆ, ತಲೆಗೆ ಸೋಕಿಸಿದೆ. ಇಷ್ಟಕ್ಕೆ ಸೂತಕ ಹೋಯಿತೇ? ಒಳಗೊಳಗೇ ನಗು ಬಂತು. ಯೋಚನೆಗೆ ಸಿಕ್ಕಿದ ವಿಷಯ ಮತ್ತದೇ ಗಿರಿಜೆಯ ಸಂಸಾರ. ದುರದೃಷ್ಟ ಅಂದರೆ ಅವರ ಮಗನೂ ನಾಲ್ಕು ವರ್ಷಗಳ ಹಿಂದೆ ತೀರಿಕೊಂಡಿದ್ದು, ಅಂಥಾ ಯೋಗ್ಯನಲ್ಲ ಅಂದುಕೊಳ್ತಿದ್ದರು. ಅವನ ಮದುವೆಗೆ ತಾನೂ ಹೋಗಿದ್ದೆನಲ್ಲ! ಹೊರನೋಟಕ್ಕೆ ಜೋಡಿ ಚಂದವಿತ್ತು. ಗಿರಿಜೆಯ ಗಂಡನಿಗೆ ವರಮಾನವಿಲ್ಲ. ಸೊಸೆಯದು ಹೆಚ್ಚುವರಿಯಾಗಿ ಬಂದಾಗ ಸ್ವಲ್ಪ ಬೀಗಿದ್ದು ಉಂಟು. ಆದರೆ ಅಕ್ಕಪಕ್ಕದವರ ಗುಸುಪಿಸು ಅತ್ತೆ ಸೊಸೆಯರ ಮಧ್ಯೆ ಸಾಮರಸ್ಯವಿಲ್ಲ ಎಂಬುದು ಇದ್ದೇ ಇತ್ತು. ನರ್ಮದಾ, ನನ್ನ ಮಗಳು ಕಾಲೇಜಿನಲ್ಲಿ ಒಟ್ಟಿಗೆ ಓದಿದವರು. ಮದುವೆಯ ಫೋಟೊ ನೋಡಿ ಅಮ್ಮ ನಾವಿಬ್ಬರು ಬೇರೆ ಬೇರೆ ವಿಭಾಗವಾದರೂ ಕನ್ನಡ ವಿಷಯಕ್ಕೆ ಒಂದೇ ಕ್ಲಾಸಿನಲ್ಲಿ ಸೇರುತ್ತಿದ್ದೆವು. ಚೆನ್ನಾಗಿ ಓದ್ತಿದ್ದಳು. ಪರಿಚಯ ಆದರೆ ಗೆಳೆತನವಿಲ್ಲ ಎಂದಿದ್ದಳು. ಒಮ್ಮೆ ಅನಿರೀಕ್ಷಿತವಾಗಿ ನರ್ಮದೆಯೇ ನಮ್ಮ ಮನೆಗೆ ಬಂದು ಅವನಿಯ ಜೊತೆ ಹಳೆಯ ನೆನಪುಗಳನ್ನು ಹಂಚಿಕೊಂಡಳು. ಇಬ್ಬರ ಸಂಪರ್ಕಗಳು ವಿನಿಮಯವಾಯಿತು. ಹೊಸ ಜಾಗದಲ್ಲಿ ತಿಳಿದವರು ಕಂಡಾಗ ಕಾಣದ ವಿಶ್ವಾಸ ಸಹಜವಷ್ಟೆ!

ಅಮ್ಮ, ನರ್ಮದಾ ಸುಖವಾಗಿಲ್ಲಮ್ಮ ಹೊರಗೂ ದುಡಿದು ಮನೆಯೊಳಗೂ ಕತ್ತೆ ಚಾಕರಿ ಅಂದರೆ ಯಾರಿಗೆ ಸಹಿಸುತ್ತೆ ಹೇಳು? ಈಗ ಮೂರು ತಿಂಗಳ ಬಸುರಿ ಬೇರೆ. ಆಫೀಸಲ್ಲಿ ಯಾರೂ ಕೂರಿಸಿ ಕಳಿಸೋಲ್ಲ ಅದರಲ್ಲೂ ಖಾಸಗಿ ವಲಯದಲ್ಲಿ ಮಗೂಗೆ ಮೂರು ತಿಂಗಳಾಗುತ್ಲೆ ವಾಪಸ್